ನಾಲ್ಕು ಜನ ಬರ್ಬೇಕು' ಅಂತ. ಆದರೆ, ಮನುಷ್ಯಂಗೆ ಸಾಯೋದೇ ಗೊತ್ತಾಗಲ್ಲ. ಹಾಗಾದ್ರೆ ಈ ಲಗೇಜೆಲ್ಲ ಅದಕ್ಕೋಸ್ಕರ ಮಾಡ್ತಾ ಇದ್ದೀವಾ? ಹೆಸರು, ಸ್ಟೇಟಸ್... ಅವೆಲ್ಲ ಏನು?

ಸ್ಪಷ್ಟತೆ ಇರಬೇಕು. ನಾನು ನನ್ನ ನಾಲ್ಕು ಜನ ಸ್ನೇಹಿತರಿಗೋಸ್ಕರ ಸಿನಿಮಾ ಮಾಡುತ್ತಿರುವೆನಾ? ಅಥವಾ ಮೂರು ಮೂರು ಗಂಟೆಗಳಿಗೆ ಬೇರೆ ಬೇರೆ ಆರುನೂರು ಜನ ಪ್ರೇಕ್ಷಕರು ಬಂದು ಕೂತ್ಕೋತಾರಲ್ಲಾ, ಅವರಿಗೋಸ್ಕರ ಸಿನಿಮಾ ಮಾಡುತ್ತಿರುವೆನಾ ಎಂಬ ಸ್ಪಷ್ಟತೆ.

● **ಅವೆರಡೂ ಸಾಧ್ಯತೆಗಳನ್ನು ಮಿಕ್ಸ್ ಮಾಡೋಕೆ ಆಗಲ್ವಾ?**

ಯಾಕೆ ಮಿಕ್ಸ್ ಮಾಡಬೇಕು? ನಾನು 'ಕೆಂಡಸಂಪಿಗೆ' ಮಾಡುವಾಗ ಅದನ್ನೇ ಮಾಡಬೇಕು. ಅದರಲ್ಲಿ ಪುನೀತ್ ರಾಜ್‌ಕುಮಾರ್ ತಂದು ಡಾನ್ಸ್ ಮಾಡಿಸಲ್ಲ. ಪುನೀತ್ ಅವರಿಗೂ ನನಗೂ ಒಳ್ಳೆಯ ಸ್ನೇಹ ಇದ್ಯಲ್ಲಾ, ಕೆಂಡಸಂಪಿಗೆಯ ಆರಂಭದಲ್ಲಿ ಅವರದೊಂದು ಹಾಡು ಹಾಕ್ಬಿಟ್ರೆ ಏನಾಗ್ತಿತ್ತು? ಇನ್ನೂ ಓಡಿಬಿಡೋದು. ಈಗ ಓಡ್ತಿದ್ಯಲ್ಲಾ... ಟಗರು... ಆದ್ರೆ ನಾನು ಹಾಕಲ್ಲ. ಅದೇ 'ಜಾಕಿ' ಸಿನಿಮಾದಲ್ಲಿ ಹಾಕ್ತೀನಿ. ಈ ಸ್ಪಷ್ಟತೆ ಇರಬೇಕು. ನಮ್ಮಲ್ಲಿ ಹೊಸತಾಗಿ ಬರೋರಿಗೆ ಈ ಸ್ಪಷ್ಟತೆ ಇಲ್ಲ. ಬದುಕು–ಸೆಕ್ಸು ಮಾತಿರಲಿ... ಯಾವ ತಿಂಡಿ ಬೇಕು ಎನ್ನುವುದರ ಬಗ್ಗೆಯೂ ನಮಗೆ ಕ್ಲಾರಿಟಿ ಇರಲ್ಲ.

● **ಸಿನಿಮಾ ನಿರ್ಮಾಣದಲ್ಲಿ ಚಿತ್ರಕಥೆಗೆ ನೀವು ನೀಡುವ ಮಹತ್ವ ಯಾವ ಬಗೆಯದು?**

